Mandya	1	92.42	1025
Many Districts	2	11340	2770
Mysore	7	1794.76	34030
Raichur	3	12126.4	9524
Ramanagara	6	1203.68	5371
Shimoga	2	1003.94	1205
Tumkur	3	1990	3500
Udupi	2	1530	239
Uttara Kannada	2	7600	715
Total	**126**	**295502.6**	**595453**

ಭೂಮಾಪನ ವಿವರಗಳು

619 (1225) ಶ್ರೀ ಹ್ಯಾರೀಸ್ ಎನ್.ಎ. (ಶಾಂತಿನಗರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಭೂಮಾಪನ ಕಾರ್ಯಕ್ರಮ ಕುರಿತ ಪ್ರಗತಿಯ ವಿವರಗಳೇನು?

ಆ) ಭೂಮಾಪನ ಕೆಲಸ ಕಾರ್ಯಗಳನ್ನು ಯಾವ ರೀತಿಯಲ್ಲಿ ಕೈಗೊಳ್ಳಲಾಗಿದೆ; ಮಾಪನ ಕಾರ್ಯಕ್ಕೆ ಬೇಕಾಗುವ ಭೂಮಾಪಕರುಗಳನ್ನು ನೇಮಕ ಮಾಡಿಕೊಳ್ಳಲಾಗಿದೆಯೇ?

ಇ) ಖಾಸಗಿ ಸಹಭಾಗಿತ್ವದಲ್ಲಿ ಕೈಗೊಂಡ ಭೂಮಾಪನ ಕಾರ್ಯದ ವಿವರಗಳೇನು?

ಈ) ಭೂಮಾಪನ ಇಲಾಖೆಯಲ್ಲಿ ಖಾಲಿ ಇರುವ ಭೂಮಾಪಕರ ಹುದ್ದೆಗಳೆಷ್ಟು ಹಾಗೂ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದ ಕ್ರಮಗಳೇನು?

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಭೂಮಾಪನ ಕಾರ್ಯಕ್ರಮ ಕುರಿತ ಪ್ರಗತಿ ಈ ಕೆಳಗಿನಂತಿದೆ:–

1. ನಗರಮಾಪನ ಕೆಲಸ :– ರಾಜ್ಯದ 48 ನಗರ / ಪಟ್ಟಣ ಗಳಲ್ಲಿ ನಗರಮಾಪನ ನಿರ್ವಹಣೆ ಕಾರ್ಯ ಪ್ರಗತಿಯಲ್ಲಿ ರುತ್ತದೆ. ಏಪ್ರಿಲ್–2009 ರಿಂದ ಜನವರಿ–2010 ರವರೆಗೆ

ನಗರಮಾಪನ ಕಛೇರಿಗಳಲ್ಲಿ ವಿವಿಧ ಪ್ರಕರಣಗಳ ವಿಲೇವಾರಿ ಒಟ್ಟು 101192 ಆಗಿರುತ್ತದೆ.

2. ಮೇಲಿನ ಅವಧಿಯಲ್ಲಿ ಮ್ಯುಟೇಶನ್ ಹಾಗೂ ಅಳತೆ ಪ್ರಕರಣಗಳು ಒಟ್ಟು 161593 ವಿಲೇವಾರಿ ಆಗಿರುತ್ತದೆ.

3. 27 (ಗ್ರಾಮ / ಪಟ್ಟಣಗಳ ಪೈಕಿ 15 ಪ್ರದೇಶಗಳಲ್ಲಿ ನಗರ ಮಾಪನ ಕಾರ್ಯವು ಪೂರ್ಣಗೊಂಡಿದ್ದು, ಉಳಿದೆಡೆ ಗಳಲ್ಲಿ ಪ್ರಗತಿಯಲ್ಲಿರುತ್ತದೆ.

4. ಖಾಸಗಿ ಸಹಭಾಗಿತ್ವದೊಂದಿಗೆ (ಪಿ.ಪಿ.ಪಿ.) ಮಾದರಿ ಯೋಜನೆಯಡಿ 5 ನಗರಗಳಾದ ಮಂಗಳೂರು, ಮೈಸೂರು, ಶಿವಮೊಗ್ಗ, ಹುಬ್ಬಳ್ಳಿ–ಧಾರವಾಡ, ಬಳ್ಳಾರಿ ನಗರ ಮಾಪನ ಕಾರ್ಯ ಕೈಗೆತ್ತಿಕೊಳ್ಳಲಾಗಿದೆ.

5. **ಪರವಾನಗಿ ಭೂಮಾಪಕರ ಯೋಜನೆ:–**

ಪರವಾನಗಿ ಭೂಮಾಪಕರ ಯೋಜನೆಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗಿದೆ. ಜನವರಿ 2010ರ ಅಂತ್ಯಕ್ಕೆ 106338 ಪ್ರಕರಣಗಳಲ್ಲಿ 11ಇ ನಕ್ಷೆಗಳನ್ನು ತಯಾರಿಸಿ ಸಾರ್ವಜನಿಕರಿಗೆ ನೀಡಲಾಗಿದೆ.

6. **ತತ್ಕಾಲ್ ಪೋಡಿ ಯೋಜನೆ:–**

ತತ್ಕಾಲ್ ಪೋಡಿ ಯೋಜನೆಯನ್ನು ಜಾರಿಗೊಳಿಸ ಲಾಗಿದ್ದು, ಜನವರಿ 2010ರ ಅಂತ್ಯಕ್ಕೆ ಒಟ್ಟು 21759 ಅರ್ಜಿಗಳನ್ನು ವಿಲೇಗೊಳಿಸಲಾಗಿದೆ.

ಆ) ಭೂಮಾಪನ ಕೆಲಸ ಕಾರ್ಯವನ್ನು ಶಂಕು ಸರಪಳಿ, ಸಮತಲ ಮೇಜು ಮೋಜಣಿ (P.T) ಟೋಟಲ್ ಸ್ಟೇಷನ್, ಡಿ.ಜಿ.ಪಿ.ಎಸ್., ಉಪಕರಣಗಳ ಮುಖಾಂತರ ಅಳತೆ ಕೆಲಸವನ್ನು ಕೈಗೊಳ್ಳಲಾಗುತ್ತಿದೆ. ಹಮ್ಮಿಕೊಂಡಿರುವ ಯೋಜನೆಗಳಿಗೆ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಭೂಮಾಪಕರನ್ನೇ ನಿಯೋಜಿಸಿದೆ. ಭೂಮಾಪಕರನ್ನು ನೇಮಕ ಮಾಡುವ ಬಗ್ಗೆ ಕಂಡಿಕೆ (ಈ)ನಲ್ಲಿ ಉತ್ತರಿಸಲಾಗಿದೆ.